


## ಮೂರು ಮಕ್ಕಳು

ಒಬ್ಬ ತಂದೆಗೆ ಮೂರುಜನ ಮಕ್ಕಳು. ಒಮ್ಮೆ ತಂದೆಗೆ ಬಹಳ ಖಾಯಿಲೆಯಾಗಿ, ಮರಣಾವಸ್ಥೆಯಲ್ಲಿರುವಾಗ, ತನ್ನ ಮೊದಲನೆಯ ಮಗನನ್ನು ಕರೆದು,

"ನನಗೆ ಸಾವಿನ ಅಂಜಿಕೆಯಾಗಿದೆ ಏನು ಮಾಡಲಿ?" ಎಂದ. ಮಗ, "ಖಾಯಿಲೆಗೆ ಮಾಡಬೇಕಾದ ಔಷಧ, ಚಿಕಿತ್ಸೆ ಎಲ್ಲ ಮಾಡಾಯಿತಪ್ಪ. ಈಗ ಕೈಮೀರಿದೆ. ಏನೂ ಮಾಡಲಾಗದು" ಎಂದ.

ಇವನು ಪ್ರಯೋಜನವಿಲ್ಲವೆಂದು ಎರಡನೇ ಮಗನನ್ನು ಕರೆದು ಕೇಳಿದ. ಎರಡನೆಯವನು, "ಅಪ್ಪಾ! ನೀನು ಚಿಂತೆ ಇಲ್ಲದೆ ನೆಮ್ಮದಿಯಾಗಿ ಸಾವಿಗೆ ತಯಾರಾಗು. ಏನೂ ಯೋಚಿಸಬೇಡ. ನೀನು ಸತ್ತನಂತರ, ನಾನು ನಿನಗೆ ಸರಿಯಾಗಿ, ಕರ್ಮ, ದಾನ ಎಲ್ಲವನ್ನೂ ಮಾಡುವೆ" ಎಂದ.

ಇವರಿಬ್ಬರೂ ಪ್ರಯೋಜನವಿಲ್ಲವೆಂದು, ತಂದೆ ಮೂರನೆ ಮಗನನ್ನು ಕರೆದು, "ಸಾವಿಗೆ ಅಂಜಿಕೆಯಾಗಿದೆ ಮಗಾ. ಏನು ಮಾಡಲಿ?" ಎಂದಾಗ ಮೂರನೆಯವನು, "ಅಪ್ಪಾ! ಸಾವು ಯಾರಿಗೂ ತಪ್ಪಿದ್ದಲ್ಲ. ನೀನು ಧೈರ್ಯವಾಗಿ ಎದುರಿಸಬೇಕು. ಬೇರೆ ಏನನ್ನೂ ಯೋಚನೆ ಮಾಡಬೇಡ. ಏಕೆಂದರೆ, ನಾನು ಸಹ, ನಿನ್ನ ಜೊತೆ ಬರುವೆ, ಮತ್ತೆ ಮುಂದೆಯೂ ಯಾವಾಗಲೂ ನಿನ್ನ ಜೊತೆಯೆ ಇರುವೆ" ಎಂದ. ತಂದೆ ಆಗ ಸುಖವಾಗಿ ಅಸುನೀಗಿದ.

ಅರ್ಥ: ಮೊದಲನೆಯ ಮಗ : ಹಣ. ಇದು ಕೈಯಲ್ಲಿರುವವರೆಗೆ ಏನೆಲ್ಲ ಮಾಡಬಹುದು!!

ಎರಡನೆಯ ಮಗ : ಬಂಧು, ಬಳಗ, ತಿಥಿ, ಕರ್ಮ, ದಾನಗಳಲ್ಲಿ ಭಾಗವಹಿಸುವರಷ್ಟೇ.

ಮೂರನೆಯ ಮಗ : ನಾವು ಮಾಡಿದ ಕರ್ಮ ಮತ್ತು ಅದರ ಫಲ.

ಇವು ಹಿಂದೆಯೂ ಇದ್ದವು, ಈಗಲೂ ಇವೆ, ನಂತರ ನಮ್ಮ ಜೊತೆ ಏಕೈಕ ಸಹಯಾತ್ರಿಯಾಗಿ ಮುಂದೆಯೂ ಬರುತ್ತವೆ.




*"ಆತ್ಮ ಹೋದರೆ ದೇಹ*
*ಅಗ್ನಿಯ ಪಾಲು.*

*ಕಠಿಣ ಶಲ್ಯಗಳೆರಡು ...*
*ಗಂಗೆಯ ಪಾಲು*

*ಮೇಲೆ ಹೊದಿಸಿದ*
*ಬಟ್ಟೆ....ಅಗಸನ ಪಾಲು*

*ಮಗನು ಹಾಕುವ*
*ಪಿಂಡ.... ಕಾಗೆಗಳ*
*ಪಾಲು*

*ಪಾಪ ಪುಣ್ಯಗಳೆರಡೇ ..*
*ಹೋಪ ಆತ್ಮನ ಪಾಲು"*

**ಕಥೆ :**

**ಪುಷ್ಪ ಶೇಷಾದ್ರಿ**